<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಭ್ರಷ್ಟಾಚಾರ ನಿಗ್ರಹ ಪ್ರಕರಣಗಳ ಅಧಿವಿಚಾರಣ ವಿಶೇಷ ನ್ಯಾಯಾಲಯ, ಕೋಲಾರ</u>

**Spl. C. (P.C.) 09/2014**

ಪ್ರಾಸಾಃ **14** ಚಾಸಾಃ **41**
ದಿನಾಂಕಃ **09-04-2026**

ಹೆಸರು :: ಭೈರೇಗೌಡ ಎನ್
ತಂದೆಯ ಹೆಸರು :: ನಂಜುಂಡಪ್ಪ
ವಯಸ್ಸು :: 42 ವರ್ಷ
ಉದ್ಯೋಗ :: ವಾರ್ಡನ್
ವಾಸ ಸ್ಥಳ :: ಶ್ರೀನಿವಾಸಪುರ

<u>ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಗಕರಿಂದಃ</u>

1. 2010 ರಿಂದ ಡಿಸೆಂಬರ್ 2012 ರವರೆಗೆ ನಾನು ಕೋಲಾರದ ಕೀಲುಕೋಟೆಯಲ್ಲಿರುವ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿ ನಿಲಯದಲ್ಲಿ ವಾರ್ಡನ್ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ಅದೇ ಅವಧಿಯಲ್ಲಿ ನಾನು ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿ ನಿಲಯ, ಗಾಂಧಿನಗರ, ಕೋಲಾರ ಈ ಹಾಸ್ಟೆಲ್ ನ ವಾರ್ಡನ್ ನ ಹೆಚ್ಚುವರಿ ಪ್ರಭಾರವನ್ನೂ ಸಹಾ ಹೊಂದಿದ್ದೆ.

2. ದಿನಾಂಕ 19.12.2012 ರಂದು ಕೋಲಾರ ಲೋಕಾಯುಕ್ತ ಕಛೇರಿಯವರು ವಿಚಾರಣೆಗೆ ಹಾಜರಾಗುವಂತೆ ಒಂದು ನೋಟೀಸು ನೀಡಿದರು. ನಾನು ದಿನಾಂಕ 22.12.2012 ರಂದು ತನಿಖಾಧಿಕಾರಿ ಮುಂದೆ ಹಾಜರಾದೆ. ತನಿಖಾಧಿಕಾರಿಯು ನನಗೆ ಮೇಲೆ ಹೇಳಿದ ಎರಡೂ ಹಾಸ್ಟೆಲ್ ನ ಈಗ ತೋರಿಸಿದ ನಿ ಪಿ 445 ಮತ್ತು ನಿ ಪಿ 523 ದಾಖಲೆಗಳನ್ನು ತೋರಿಸಿದರು. ಸದರಿ ಬಿಲ್ಲುಗಳಲ್ಲಿ ಹೆಸರಿಸಿದ ನೌಕರರು ಆ ವಿದ್ಯಾರ್ಥಿ ನಿಲಯಗಳಲ್ಲಿ ಆ ಅವಧಿಯಲ್ಲಿ ಕೆಲಸ ನಿರ್ವಹಿಸಿರುವುದಿಲ್ಲ. ಆ ದಾಖಲೆಗಳ ಹಣ ಸಂದಾಯ ರಸೀದಿಯಲ್ಲಿನ ಮೇಲ್ವಿಚಾರಕರು ಎಂಬ ಸೀಲುಗಳು ನಕಲಿ ಇವೆ. ಆ ಸೀಲುಗಳ ಮೇಲಿನ ಸಹಿಗಳು ನನ್ನದಲ್ಲ. ಸಾಕ್ಷಿದಾರರು ಗುರುತಿಸಿದ ಸದರಿ ಹಣ ಸಂದಾಯ ರಸೀದಿಗಳನ್ನು ನಿ ಪಿ 445(ಎ) ಮತ್ತು 523(ಎ) ಎಂದು ಗುರುತಿಸಲಾಯಿತು.

3. ಕೀಲುಕೋಟೆಯಲ್ಲಿನ ಹಾಸ್ಟೆಲ್ ನಲ್ಲಿ ಅಡುಗೆಯವರಾಗಿ ಸೋಮನಾಥ, ಚೆನ್ನಪ್ಪ, ಸುಕುಮಾರ್ ಮತ್ತು ಅಡುಗೆ ಸಹಾಯಕರಾಗಿ ಲಕ್ಷ್ಮಮ್ಮ ಮತ್ತು ನಾರಾಯಣಸ್ವಾಮಿ ಇವರು ಆ ಅವಧಿಯಲ್ಲಿ ಕೆಲಸ ಮಾಡುತ್ತಿದ್ದರು. ಗಾಂಧಿನಗರದಲ್ಲಿನ ಹಾಸ್ಟೆಲ್ನಲ್ಲಿ ಅಡುಗೆಯವರಾಗಿ ಚಿಕ್ಕಮುನಿಯಪ್ಪ, ಶ್ರೀನಿವಾಸ ಮತ್ತು ಅಡುಗೆ ಸಹಾಯಕರಾಗಿ ಲಕ್ಷ್ಮಮ್ಮ ಎಲ್ ಮತ್ತು ಲಕ್ಷ್ಮಮ್ಮ ಇವರು ಕೆಲಸ ಮಾಡುತ್ತಿದ್ದರು. ಕೀಲುಕೋಟೆಯಲ್ಲಿನ ಅಡುಗೆ ಸಹಾಯಕರಾದ ಲಕ್ಷ್ಮಮ್ಮ ಮತ್ತು ಗಾಂಧಿ ನಗರ ಹಾಸ್ಟೆಲ್ ನ ಲಕ್ಷ್ಮಮ್ಮ ಬೇರೆ ಬೇರೆ. ಕೀಲುಕೋಟೆ ಹಾಸ್ಟೆಲ್ ನಲ್ಲಿನ ಚೆನ್ನಪ್ಪ ಇವರು ಸರ್ಕಾರಿ ಖಾಯಂ ನೌಕರರು. ಉಳಿದವರು ದಿನಗೂಲಿ ನೌಕರರಿದ್ದರು. ಗಾಂಧಿ ನಗರ ಹಾಸ್ಟೆಲ್ ನ ಚಿಕ್ಕಮುನಿಯಪ್ಪ ಇವರು ಸರ್ಕಾರಿ ಖಾಯಂ ನೌಕರರು ಮತ್ತು ಉಳಿದವರು ದಿನಗೂಲಿ ನೌಕರರು.

4. ನಿ ಪಿ 445(ಎ) ಹಣ ಸಂದಾಯ ರಸೀದಿಯಲ್ಲಿ ಕ್ರಮ ಸಂಖ್ಯೆ 4 ರಲ್ಲಿ ಚೆನ್ನಪ್ಪ ರವರ ಹೆಸರು ಇದೆ, ಆದರೆ ಸದರಿ ಕ್ರಮ ಸಂಖ್ಯೆಯ ಕೊನೆಯಲ್ಲಿರುವ ಸಹಿ ಸದರಿ ಚೆನ್ನಪ್ಪ ಅವರದ್ದಲ್ಲ.

5. ಖಾಯಂ ಸರ್ಕಾರಿ ನೌಕರರ ವೇತನವನ್ನು ಖಜಾನೆಯಿಂದ ನೇರವಾಗಿ ಚೆಕ್ ಮೂಲಕ ಅವರ ಅಕೌಂಟ್ ಗೆ ಜಮಾ ಆಗುತ್ತಿತ್ತು.

6. ನಿ ಪಿ 445(ಎ) ರಲ್ಲಿ ಚೆನ್ನಪ್ಪ ಇವರನ್ನು ಹೊರತು ಪಡಿಸಿ ಅಲ್ಲಿ ಹೆಸರಿಸಿದ ಬೇರೆ ಯಾರೂ ಹಾಸ್ಟೆಲ್ ನಲ್ಲಿ ಕೆಲಸ ಮಾಡಿಲ್ಲ. ಅವರು ಯಾರು ಎಂದು ಸಹಾ ನನಗೆ ಗೊತ್ತಿಲ್ಲ. ನಿ ಪಿ 523(ಎ) ರಲ್ಲಿ ಹೆಸರಿಸಿದ ವ್ಯಕ್ತಿಗಳೂ ಸಹಾ ಹಾಸ್ಟೆಲ್ ನಲ್ಲಿ ಕೆಲಸ ಮಾಡಿಲ್ಲ ಮತ್ತು ಅವರು ಯಾರು ಎಂದು ಸಹಾ ನನಗೆ ಗೊತ್ತಿಲ್ಲ.

7. ನಿ ಪಿ 445 ಮತ್ತು 523 ಎಂದು ಗುರುತಿಸಿದ ದಾಖಲೆಗಳಲ್ಲಿನ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು, ಕೋಲಾರ ಎಂಬ ಸೀಲುಗಳ ಮೇಲಿನ ಸಹಿ 1 ನೇ ಆರೋಪಿಯದ್ದು ಇವೆ.

8. ತಿಂಗಳ ಕೊನೆಯಲ್ಲಿ ಅಡುಗೆ ಕೆಲಸ ಮಾಡುವವರ ಹಣ ಸಂದಾಯ ರಸೀದಿಯನ್ನು ತಯಾರಿಸಿ ಅದಕ್ಕೆ ಸದರಿ ನೌಕರರ ಸಹಿಯನ್ನು ಪಡೆದು ತಾಲ್ಲೂಕು ಸಮಾಜ

ಕಲ್ಯಾಣಾಧಿಕಾರಿಗಳ ಕಛೇರಿಗೆ ನೀಡುತ್ತಿದ್ದೆ. ಬಿಲ್ ಮಾಡುವ ಸಂಪೂರ್ಣ ಅಧಿಕಾರ 1 ನೇ ಆರೋಪಿಯಾದ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗೆ ಇತ್ತು.

9. ದಿನಾಂಕ 19.01.2013 ರಂದು ಪುನಃ ನನ್ನನ್ನು ಲೋಕಾಯುಕ್ತ ಕಛೇರಿಗೆ ತನಿಖಾಧಿಕಾರಿ ಕರೆಸಿಕೊಂಡಿದ್ದರು. ಆ ದಿನ ಒಟ್ಟು 6 ವಾರ್ಡನ್ ಗಳು ಹೋಗಿದ್ದೆವು. ಆ ದಿನ ತನಿಖಾಧಿಕಾರಿ ನಮ್ಮ ಹೇಳಿಕೆಯನ್ನು ಪಡೆದಿದ್ದಾರೆ ಮತ್ತು ನನ್ನ ಮಾದರಿ ಬರವಣಿಗೆಗಳನ್ನು ಮತ್ತು ಸಹಿಯನ್ನು ಪಡೆದಿದ್ದಾರೆ. ಆ ದಿನ ನಾನು ಗಾಂಧಿ ನಗರದಲ್ಲಿನ ಹಾಸ್ಟೆಲ್ ನ ಮೇಲ್ವಿಚಾರಕರ ಸೀಲನ್ನೂ ಸಹಾ ತನಿಖಾಧಿಕಾರಿಗೆ ನೀಡಿದೆ. ಆ ಸೀಲಿನ ಸ್ಪೆಸಿಮನ್ ಗಳನ್ನೂ ಸಹಾ ತನಿಖಾಧಿಕಾರಿ ನನ್ನ ಸಮಕ್ಷಮ ತೆಗೆದುಕೊಂಡರು. ಈಗ ತೋರಿಸಿದ ನಿ ಪಿ 249 ಸದರಿ ಸೀಲ್ ನ ಸ್ಪೆಸಿಮನ್ ಗಳು ಇವೆ. ಈಗ ತೋರಿಸಿದ ನಿ ಪಿ 251 ದಾಖಲೆಗಳು ತನಿಖಾಧಿಕಾರಿ ಪಡೆದ ನನ್ನ ಮಾದರಿ ಬರವಣಿಗೆ ಮತ್ತು ಸಹಿಗಳು ಇವೆ. ಅವುಗಳನ್ನು ಪಡೆದುಕೊಳ್ಳುವಾಗ ಈಗ ತೋರಿಸಿದ ನಿ ಪಿ 257 ರಂತೆ ಮಹಜರು ಮಾಡಿದ್ದಾರೆ. ನಿ ಪಿ 257 ರಲ್ಲಿನ ಸಾಕ್ಷಿದಾರರ ಸಹಿಯನ್ನು 257(ಬಿ) ಎಂದು ಗುರುತಿಸಲಾಯಿತು. ಈಗ ತೋರಿಸಿದ ಸೀಲನ್ನೇ ತನಿಖಾಧಿಕಾರಿಗೆ ನೀಡಿದ್ದೇನೆ. ಸದರಿ ಸೀಲನ್ನು ಮು ಮಾಲು 1 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎಂ.ಹೆಚ್ ವಕೀಲರಿಂದಃ</u>

10. ಹಾಸ್ಟೆಲ್ ಗೆ ಸಂಬಂಧಿಸಿದ ಸೀಲನ್ನು ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಯವರಿಗೆ ಪತ್ರ ಬರೆದು ನಾವೇ ಮಾಡಿಸಿಕೊಳ್ಳುತ್ತೇವೆ. ಗಾಂಧಿನಗರದ ಹಾಸ್ಟೆಲ್ ಗೆ ಸಂಬಂಧಿಸಿದ ಮು ಮಾಲು 1 ಸೀಲನ್ನು ನಾನು ಆ ಹಾಸ್ಟೆಲ್ ನ ವಾರ್ಡನ್ ಚಾರ್ಜ್ ಪಡೆಯುವಾಗ ಹಿಂದಿನ ವಾರ್ಡನ್ ನಿಂದ ಪಡೆದಿದ್ದೆ. ಆ ಚಾರ್ಜ್ ಲಿಸ್ಟ್ ನಲ್ಲಿ ಸೀಲ್ ನ ಹಸ್ತಾಂತರದ ಬಗ್ಗೆ ನಮೂದು ಇದೆ.

11. ಹಾಸ್ಟೆಲ್ ಗೆ ಏನೇನು ಬೇಕು ಎಂದು ವಾರ್ಡನ್ ರವರು ಒಂದು ಲಿಸ್ಟನ್ನು ತಯಾರಿಸುತ್ತಾರೆ ಎಂದರೆ ಸರಿ. ಆ ಲಿಸ್ಟನ್ನು ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳಿಗೆ ಕಳುಹಿಸುತ್ತೇವೆ. ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ ಕಛೇರಿಯಲ್ಲಿ ಕೇಸ್ ವರ್ಕರ್ ರವರು ಆ ಲಿಸ್ಟನ್ನು ಪರಿಶೀಲಿಸಿ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಯವರ ಮುಂದೆ ಮಂಡಿಸುತ್ತಾರೆ

ಎಂದರೆ ಸರಿ. ನಂತರ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ ಅದರ ಮೇಲೆ ಆದೇಶ ಮಾಡುತ್ತಾರೆ ಎಂದರೆ ಸರಿ.

<u>ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀ ಪಿ.ಎನ್.ಕೆ ವಕೀಲರಿಂದಃ</u>

12. ಹಾಸ್ಟೆಲ್ ನಲ್ಲಿ ಕೆಲಸ ಮಾಡುವ ಖಾಯಂ ನೌಕರರು ಮತ್ತು ದಿನಗೂಲಿ ನೌಕರರು ಇವರ ವೇತನ ಹೇಗೆ ಆಗುತ್ತದೆ ಎಂದರೆ ಸಾಕ್ಷಿದಾರರು ತಿಂಗಳ ಕೊನೆಯಲ್ಲಿ ಸಂಬಂಧಿಸಿದ ನೌಕರರ ಹಣ ಸಂದಾಯ ರಸೀದಿಗಳನ್ನು ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿಗೆ ಸಲ್ಲಿಸುತ್ತೇವೆ, ಅದನ್ನು ಸಂಬಂಧಿಸಿದ ಅಧಿಕಾರಿ ಪರಿಶೀಲಿಸಿ ಡಿಸಿ ಬಿಲ್ಲನ್ನು ತಯಾರಿಸಿ ಹಣ ಸಂದಾಯ ರಸೀದಿಗಳನ್ನು ಖಜಾನೆಗೆ ಕಳುಹಿಸುತ್ತಾರೆ, ನಂತರ ಖಜಾನೆಯಿಂದ ಅಕೌಂಟ್ ಪೇಯೀ ಚೆಕ್ ಪಡೆದು ಸಂಬಂಧಿಸಿದ ನೌಕರನ ಖಾತೆಗೆ ಅನುಬಂಧವನ್ನು ರಚಿಸಿ ಖಾತೆಗೆ ಜಮಾ ಮಾಡಲು ಬ್ಯಾಂಕಿಗೆ ತಾಲ್ಲೂಕು ಸಮಾಜ ಕಲ್ಯಾಣ ಕಛೇರಿಯಿಂದ ಕಳುಹಿಸುತ್ತಾರೆ. ಇದು ಖಾಯಂ ನೌಕರರಿಗೆ. ದಿನಗೂಲಿ ನೌಕರರಿಗೆ ಡಿಸಿ ಬಿಲ್ಲನ್ನು ರಚಿಸಿ ಸಂಬಂಧಿಸಿದ ನೌಕರನ ಹೆಸರಿಗೆ ಖಜಾನೆಯಿಂದ ಅಕೌಂಟ್ ಪೇಯೀ ಚೆಕ್ಕನ್ನು ಪಡೆಯುತ್ತಾರೆ. ನಂತರ ಸದರಿ ನೌಕರರನ್ನು ತಾಲ್ಲೂಕು ಸಮಾಜ ಕಲ್ಯಾಣ ಕಛೇರಿಗೆ ಕರೆಸಿ ಅವರ ಸಹಿಯನ್ನು ಡಿಸಿ ಬಿಲ್ ಬುಕ್ ಗೆ ಪಡೆದು ನೇರವಾಗಿ ಅವರಿಗೆ ಚೆಕ್ಕನ್ನು ನೀಡುತ್ತಾರೆ ಎನ್ನುತ್ತಾರೆ.

13. ಹಾಸ್ಟೆಲ್ ಗಳಲ್ಲಿ acquittance register ನ್ನು ನಿರ್ವಹಿಸುವುದಿಲ್ಲ, ಅದನ್ನು ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ ಕಛೇರಿಯಲ್ಲಿ ನಿರ್ವಹಿಸುತ್ತಾರೆ.

14. ಸಾಕ್ಷಿದಾರರಿಗೆ ನಿ ಪಿ 523(ಎ) ಮತ್ತು 445(ಎ) ಇವುಗಳನ್ನು ತೋರಿಸಿ ವಾರ್ಡನ್ ರವರು ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಯವರಿಗೆ ಆ ರೀತಿ ಹಣ ಸಂದಾಯ ರಸೀದಿಯನ್ನು ಕಳಿಸಿದ ಮೇಲೆ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಯವರು ಬಿಲ್ ಪಾಸ್ ಮಾಡುತ್ತಾರೆ ಎಂದರೆ ಸಾಕ್ಷಿದಾರರು ಪರಿಶೀಲಿಸಿ ಪಾಸ್ ಮಾಡುತ್ತಾರೆ ಎನ್ನುತ್ತಾರೆ. ನಂತರ ನೀಡಲಾದ ಚೆಕ್ ಗಳು ನೌಕರರಿಗೆ ಹೋಗುತ್ತವೆ ಎಂದರೆ ಸರಿ.

<u>ಪಾಟೀ ಸವಾಲುಃ</u> 5, 6 ಮತ್ತು 7 ನೇ ಆರೋಪಿತರ ಪರ ವಕೀಲರು ತಮ್ಮ ಪರವಾಗಿ ಈ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತಿಳಿಸುತ್ತಾರೆ.

<u>ಮರು ವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ಅವರ ಹೇಳಿಕೆಯನ್ನು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿ, ಪುನಃ ಓದಿ ಹೇಳಲಾಯಿತು ಮತ್ತು ಸಾಕ್ಷಿದಾರರು ಸರಿ ಇದೆ ಎಂದು ತಿಳಿಸುತ್ತಾರೆ.)

ಓ. ಹೇ. ಕೇ. ಸ. ಇದೆ,

(ವಿಜಯಕುಮಾರ್ ಎಂ. ಆನಂದಶೆಟ್ಟಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೋಲಾರ